(2)

ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ 01 V3 ಸಿಡಿಸಿ(2) 2018-19 /3083

ನಿರ್ದೇಶಕರ ಕಛೇರಿ
ಅರಮನೆ ರಸ್ತೆ
ಬೆಂಗಳೂರು-560 001
ದಿ: 19-02-2019.

-:ಸುತ್ತೋಲೆ:-

ವಿಷಯ: 48ನೇ ಐಎಸ್‌ಟಿಇ ವಾರ್ಷಿಕ ರಾಷ್ಟ್ರೀಯ ಸಮಾವೇಶ-2019ರಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

ಉಲ್ಲೇಖ: ಅಧ್ಯಕ್ಷರು, ಐಎಸ್‌ಟಿಇ, ಕರ್ನಾಟಕ ವಿಭಾಗ, ಇವರ ಪತ್ರ ಸಂಖ್ಯೆ: ಐಎಸ್‌ಟಿಇ /ಕೆಎಸ್/2019/043, ದಿನಾಂಕ:18-02-2019.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದನ್ವಯ ಐಎಸ್‌ಟಿಇ, ಕರ್ನಾಟಕ ವಿಭಾಗ ಇವರು "Technical Education for Smart Society" ಎಂಬ ವಿಷಯದ ಬಗ್ಗೆ ಚರ್ಚಿಸಲು ದಿ:19-03-2019 ಮತ್ತು ದಿ:20-03-2019ರಂದು 48ನೇ ಐಎಸ್‌ಟಿಇ ವಾರ್ಷಿಕ ರಾಷ್ಟ್ರೀಯ ಸಮಾವೇಶ-2019ವನ್ನು ಬೆಳಗಾವಿಯ ವಿಟಿಯು, ಆವರಣ ಇಲ್ಲಿ ಆಯೋಜಿಸಿರುತ್ತಾರೆ.

ಸದರಿ ಸಮಾವೇಶದಲ್ಲಿ ಭಾಗವಹಿಸಲು ಇಚ್ಛಿಸುವ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳು, ಸಂಸ್ಥೆಯ ಪ್ರಾಚಾರ್ಯರ ಅನುಮತಿಯನ್ನು ಪಡೆದು, Website:http://iste19.vtu.ac.inನಲ್ಲಿ ನೊಂದಾಯಿಸಿಕೊಳ್ಳಲು ತಿಳಿಸಲಾಗಿದೆ.

ಸಂಸ್ಥೆಯ ಪ್ರಾಚಾರ್ಯರು ವಿಭಾಗದ ದೈನಂದಿನ ಮತ್ತು ಶೈಕ್ಷಣಿಕ ಕೆಲಸ ಕಾರ್ಯಗಳಿಗೆ/ಪಾಠ ಪ್ರವಚನಗಳಿಗೆ ತೊಂದರೆಯಾಗದಂತೆ ಕ್ರಮವಹಿಸಿ, ಆಯ್ಕೆಗೊಂಡ ಉಪನ್ಯಾಸಕರುಗಳನ್ನು ಸದರಿ ಸಮಾವೇಶದಲ್ಲಿ ಭಾಗವಹಿಸಲು ಅನುಕೂಲವಾಗುವಂತೆ ಬಿಡುಗಡೆ ಮಾಡಲು ಈ ಮೂಲಕ ಸೂಚಿಸಲಾಗಿದೆ. ಈ ಸಂಬಂಧವಾಗಿ ಇಲಾಖೆಯಿಂದ ಯಾವುದೇ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳನ್ನು ನೀಡಲಾಗುವುದಿಲ್ಲ. ಸದರಿ ತರಬೇತಿ ಅವಧಿಯ ಅನುಪಸ್ಥಿತಿಯನ್ನು OOD ಎಂದು ಪರಿಗಣಿಸಲು ಸೂಚಿಸಲಾಗಿದೆ.

ನಿರ್ದೇಶಕರು
19/2

ಇವರಿಗೆ:-

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ/ಉಪನ್ಯಾಸಕರುಗಳಿಗೆ ಮಾಹಿತಿಗಾಗಿ

ಪ್ರತಿ:-

ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, 2ನೇ ಮಹಡಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಮುಂದಿನ ಕ್ರಮಕ್ಕಾಗಿ.